ಮಂಲೆನಾಡಿನಲ್ಲಿ ಪಶುಗಳಿಗೆ ಮೇವು ಮತ್ತು ಔಷಧಗಳ ಪೂರೈಕೆ ಬಗ್ಗೆ.

೫೨೮. (ಡಿ) ಶ್ರೀ ಪಿ. ಸಿ. ಸಿದ್ದನಗೌಡ್ರು (ಕಲಘಟಗಿ).—ಮಾನ್ಯ ರೇಷ್ಮೆ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲೆನಾಡಿನಲ್ಲಿ ಈ ವರ್ಷ ಮಳೆಯು ಸಾಕಷ್ಟು ಆಗದೇ ದನಗಳಿಗೆ ಮೇವಿನ ಕೊರತೆ ಇದೆ. ಹೋದ ವರ್ಷದಂತೆ ಈ ವರ್ಷವೂ ರೈತರಿಗೆ ಮೇವು ಪೂರೈಕೆ ಮಾಡಬಹುದೋ ಹೇಗೆ ?

ಆ) ಅಲ್ಲದೇ ಕೆಲವು ಪೌಷ್ಟಿಕಾಂಶವಿರುವ ಔಷಧಿಗಳನ್ನು ಸರ್ಕಾರದವರು ಪೂರೈಸುವರೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ಅವಶ್ಯಕತೆ ಇದ್ದಲ್ಲಿ ಮೇವಿನ ಕೊರತೆ ನೀಗಲು ಪ್ರಯತ್ನಿಸಲಾಗುವುದು.

ಆ) ಪೌಷ್ಟಿಕಾಂಶವಿರುವ ಔಷಧಿಗಳನ್ನು ಅಗತ್ಯವಿರುವ ಬರಪೀಡಿತ ಪ್ರದೇಶಗಳಿಗೆ ಸರಬರಾಜು ಮಾಡಲಾಗುವುದು.

ಕೊಡಗಿನಲ್ಲಿ ಟೀ ಪ್ಲಾಂಟೇಶನ್ ಮಾಡುವ ಬಗ್ಗೆ.

೪೮೩. ಶ್ರೀ ವಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ್).—ಮಾನ್ಯ ಅರಣ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗಿನಲ್ಲಿ ಟೀ ಪ್ಲಾಂಟೇಶನ್ ಮಾಡಲು ಯಾವ ಸ್ಥಳವನ್ನು ಆರಿಸಲಾಗಿದೆ ?

ಆ) ಇದಕ್ಕಾಗಿ ಎಷ್ಟು ಎಕರೆ ಜಮೀನನ್ನು ಮೀಸಲಿಡಲಾಗಿದೆ ?

ಇ) ಇದನ್ನು ಪ್ರಾರಂಭಿಸಲು ಏಜೆನ್ಸಿ ಯಾವುದು ?

ಈ) ಇದಕ್ಕಾಗಿ ಎಷ್ಟು ಹಣ ತೊಡಗಿಸಲಾಗುವುದು ?

ಉ) ಇದರಿಂದ ಸರ್ಕಾರಕ್ಕೆ ಆಗತಕ್ಕ ಪ್ರಯೋಜನವೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಮಡಿಕೇರಿ ಹತ್ತಿರದ ಗಾಳಿಬೀಡು ಪ್ರದೇಶದಲ್ಲಿ ಟೀ ತೋಟವನ್ನು ಕರ್ನಾಟಕ ಅರಣ್ಯ ನೆಡುತೋಪು ನಿಗಮದ ಮುಖಾಂತರ ಮಾಡಲು ಉದ್ದೇಶಿಸಿದೆ.

ಆ) ೨,೦೯೬ ಹೆಕ್ಟೇರ್ ಸರ್ಕಾರಿ ಜಮೀನನ್ನು ನಿಗಮಕ್ಕೆ ಕೊಡಲಾಗಿದೆ. ಹಾಗೂ ಸರ್ವೆಯನ್ನು ಸಹ ಮಾಡಲಾಗಿದೆ.

ಇ) ಕರ್ನಾಟಕ ಅರಣ್ಯ ನೆಡುತೋಪು ನಿಗಮದ ಮುಖಾಂತರ ಮಾಡಲು ಉದ್ದೇಶಿಸಿರುತ್ತಾರೆ. ಸದ್ಯಕ್ಕೆ ಕರ್ನಾಟಕ ಅರಣ್ಯ ನೆಡುತೋಪು ನಿಗಮವು ಕನ್ಸಾಲಿಡೇಟೆಡ್ ಕಾಫಿ ಲಿ ಪಾಲಿ ಬೆಟ್ಟ, ಕೊಡಗು ಜಿಲ್ಲೆ ಇವರೊಡನೆ ಈ ವಿಚಾರವಾಗಿ ಮಾತುಕತೆ ನಡೆಸುತ್ತಾರೆ.

ಈ) ಈ ಯೋಜನೆಗೆ ಸುಮಾರು ೭೫೫.೭೮ ಲಕ್ಷ ರೂ.ಗಳು ಮೊದಲನೆ ಹಂತದಲ್ಲಿ ೮೦೦ ಹೆಕ್ಟೇರು ಟೀ ತೋಟು ನಿರ್ಮಿಸಲು ಬೇಕಾಗುವುದೆಂದು ಅಂದಾಜು ಮಾಡಲಾಗಿದೆ.

ಉ) ೧ ಚಹ ತೋಟ ಬೆಳೆಸುವುದರಿಂದ ಪಶ್ಚಿಮ ಘಟ್ಟದಲ್ಲಿನ ಬರೀ ಹುಲ್ಲು ಬೆಳೆಯುತ್ತಿರುವ ಬಂಜರು ಪ್ರದೇಶದ ಅಭಿವೃದ್ಧಿಯಾಗುತ್ತದೆ. ಹಾಗೂ ಔದ್ಯೋಗಿಕವಾಗಿ ಹಿಂದುಳಿದ ಕೊಡಗು ಜಿಲ್ಲೆಯಲ್ಲಿ ಉದ್ಯೋಗ ಸ್ಥಾಪನೆಗೆ ಸಹಕಾರಿಯಾಗುವುದಲ್ಲದೆ ಸುಮಾರು ೩ ೦೦೦ ಸ್ಥಳೀಯ ಜನರಿಗೆ ೫ ವರ್ಷಗಳಲ್ಲಿ ಉದ್ಯೋಗವಕಾಶವಾಗುತ್ತದೆ.

೨ ಚಹ ಬೆಳೆಯುವುದರಿಂದ ಸರ್ಕಾರಕ್ಕೆ ವಿವಿಧ ರೀತಿಯ ತೆರಿಗೆಗಳಿಂದ ಆದಾಯ ಬರುತ್ತದೆ.

೩ ಟೀ ರಫ್ತು ಮಾಡುವ ವಸ್ತುವಾದ್ದರಿಂದ ಸರ್ಕಾರಕ್ಕೆ ವಿದೇಶಿ ವಿನಿಮಯಗಳಿಸಲು ಸಾಧ್ಯವಾಗುತ್ತದೆ.